ಮಾಡಿತು. ನಾನು ಕೆಲವು ದಿವಸಗಳು ಆ ದುಃಖದಿಂದ ಹೊರಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಅತ್ಯಂತ ಆತ್ಮೀಯತೆಯಿಂದ ಅವರು ನನ್ನ ಜೊತೆ ನಡೆದುಕೊಂಡಿದ್ದರು. ಮಾನ್ಯ ದೇಶ್‌ಮುಖ್ ಮದನರವರಿಗೂ ನಾನು ಇಷ್ಟೇ ಹೇಳುತ್ತೇನೆ, ಉಳಿದ ಅಧಿಕಾರ ಅವಧಿಗೆ ನಿಮ್ಮೊಡನೆ ಆತ್ಮೀಯತೆಯಿಂದ ಸೌಹಾರ್ದತೆಯಿಂದ ನನ್ನ ಎಲ್ಲಾ ಸಹಕಾರ, ಪ್ರೋತ್ಸಾಹವನ್ನು ಕೊಟ್ಟು ಈ ಕಾರ್ಯಕಲಾಪಗಳನ್ನು ತಾವು ಮತ್ತು ನಾನು ಜವಾಬ್ದಾರಿಯಿಂದ ಮತ್ತು ಗೌರವದಿಂದ ತೆಗೆದುಕೊಂಡು ಹೋಗೋಣ ಎನ್ನುವ ಮಾತು ಹೇಳಿ, ಉಪಾಧ್ಯಕ್ಷರು ಎಂದರೆ, ಅವರು ಎಲ್ಲಾ ಕಾರಣಗಳಿಗೂ ಅಧ್ಯಕ್ಷರು. ನನ್ನ ಗೈರುಹಾಜರಿಯಲ್ಲಿ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸುತ್ತಾರೆ. ಗೌರವ ಪ್ರೀತಿ ಆದರಗಳಿಗೆ ಎಲ್ಲಾ ವಿಷಯಗಳಿಗೆ ಸಭಾಧ್ಯಕ್ಷರಿಗೆ ಎಷ್ಟು ಗೌರವ ಸಿಗಬೇಕು, ಅಷ್ಟೇ ಗೌರವ ಎಲ್ಲಾ ವಲಯಗಳಿಂದ ಉಪಾಧ್ಯಕ್ಷರಿಗೂಕೂಡ ಸಿಗಬೇಕೆಂದು ಹೇಳಿ ಅವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಈಗ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನರವರು ತಮ್ಮ ಎರಡು ಮಾತುಗಳನ್ನು ಈ ಸಭೆಗೆ ತಿಳಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮದನ (ಉಪಾಧ್ಯಕ್ಷರು) :— ಅಧ್ಯಕ್ಷರೇ, ಸಭಾನಾಯಕರೆ, ವಿರೋಧ ಪಕ್ಷದ ನಾಯಕರೆ, ಇನ್ನಿತರ ಎಲ್ಲಾ ಪಕ್ಷಗಳ ನಾಯಕರೆ, ಮತ್ತು ಸದಸ್ಯರೆ, ಮೊಟ್ಟಮೊದಲು ನನ್ನನ್ನು ಅವಿರೋಧವಾಗಿ ಆರಿಸಿದ್ದಕ್ಕಾಗಿ ತಮ್ಮೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ಅಧ್ಯಕ್ಷರು ಹೇಳಿದ ಪ್ರಕಾರ ಯಾವ ಪ್ರಕಾರ ನಮ್ಮ ಮಾಮನಿಯವರು ಈ ಸದನವನ್ನು ತೆಗೆದುಕೊಂಡು ಹೋಗುತ್ತಿದ್ದರು, ಅದೇ ಪ್ರಕಾರ ನಾನೂ ಸಹ ತಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ಸದನದ ಗೌರವ ಘನತೆ ಕಾಪಾಡಲು ತಮ್ಮೆಲ್ಲರ ಸಹಕಾರವನ್ನು ಕೋರಿ ಇವತ್ತಿನ ದಿವಸ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

3) ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಕುಂಭೆ ಸುಂದರರಾವ್ (ಸುರತ್ಕಲ್) :— ಮಾನ್ಯ ಅಧ್ಯಕ್ಷರೆ, ದೀಪಾ ಶಿಕ್ಷಣ ಸಂಸ್ಥೆ ಮತ್ತು ಸೇವಾ ಟ್ರಸ್ಟ್ ಬೋಗಾದಿ, ಮೈಸೂರು ಇವರು ನಡೆಸುತ್ತಿರುವ ಕನ್ನಡ ಮಾಧ್ಯಮ ಶಾಲೆಯಲ್ಲಿ 5ನೇ ತರಗತಿಯನ್ನು ಪ್ರಾರಂಭಿಸಲು ಅನುಮತಿ ನೀಡುವ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಬಿ.ಆರ್. ಯಾವಗಲ್ (ನರಗುಂದ) :— ಮಾನ್ಯ ಅಧ್ಯಕ್ಷರೆ, ಮತ್ತೇಕೆರೆ ಬಡಾವಣೆಯ 1ನೇ 'ಸಿ ಅಡ್ಡರಸ್ತೆಯಲ್ಲಿರುವ 3 ಅಡಿ ಅಗಲದ ರಸ್ತೆ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ಕುರಿತು ಶ್ರೀ ಪಿ.ಸಿ. ಸಿದ್ದನಗೌಡರವರು ಸಹಿ

ಮಾಡಿರುವ ಅರ್ಜಿಯನ್ನು ಅವರ ಪರವಾಗಿ ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :— ಮಾನ್ಯ ಅಧ್ಯಕ್ಷರೆ, 'ಶ್ರೀ ಕೆ.ಎಸ್. ಪುಟ್ಟರಾಜು, ಮುಖ್ಯ ಪೇದೆ, ಮೈಸೂರು ಇವರನ್ನು ಅಮಾನತ್ತಿನಲ್ಲಿಟ್ಟು ಸಂಬಳ ನೀಡದಿರುವ ಕುರಿತು ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೇ, ಶ್ರೀ ಕೆ.ಎಸ್. ಸುಬ್ಬಯ್ಯ ನಿವೃತ್ತ ಗ್ರಾಮ ಲೆಕ್ಕಿಗರು, ಕುಣಿಗಲ್ ತಾಲ್ಲೂಕು ಇವರಿಗೆ ನಿವೃತ್ತಿ ವೇತನ ಮಂಜೂರು ಮಾಡುವ ಕುರಿತು ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :— ಎಲ್ಲಾ ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಯಿತು.

4) ವರದಿಗಳನ್ನೊಪ್ಪಿಸುವುದು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ ಸಮಿತಿಯ 38ನೇ ವರದಿಯನ್ನು ಸಮಿತಿಯ ಸದಸ್ಯನಾದ ನಾನು ಸದನದಲ್ಲಿ ಮಂಡಿಸುತ್ತಿದ್ದೇವೆ.

ಅಧ್ಯಕ್ಷರು :— ವರದಿಯನ್ನೊಪ್ಪಿಸಲಾಯಿತು.

5) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಿಲಾದ ವಿಷಯಗಳು.

ವಿಷಯ: ನಿಲುವಳಿ ಸೂಚನೆಗಳ ಮಂಡನೆಗೆ ಅನುಮತಿ ಕೋರಿ ಬಂದಿರುವ ನೋಟೀಸ್‌ಗಳು.

ಅಧ್ಯಕ್ಷರು :— ಮೂರು ನಿಲುವಳಿ ಸೂಚನೆಗೆ ನೋಟೀಸ್ ಬಂದಿವೆ, ಅವು ಯಾವುದೂ ಕೂಡ ನಿಲುವಳಿ ಸೂಚನೆ ಕಂಡಿಷನ್‌ಗೆ ಫುಲ್‌ಫಿಲ್ ಆಗುವುದಿಲ್ಲ. ಮೂರನ್ನೂ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಆದರೆ ನಿನ್ನೆ ಮೊನ್ನೆ ನಡೆದಂತಹ ಚರ್ಚೆ ನಡೆಯುವುದಾದರೆ ರಾಜ್ಯಪಾಲರ ಭಾಷಣಕ್ಕೆ ನಾವು ನಮ್ಮ ನಿಗಧಿತ ಅವಧಿಯೊಳಗೆ ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು 15ನೇ ತಾರೀಖಿನ ಒಳಗೆ ಪೂರ್ತಿ ಮಾಡಬೇಕಾಗುತ್ತದೆ. ನಿನ್ನೆ ಇದ್ದಂತಹ ಶೂನ್ಯ ವೇಳೆ ಕೂಡ ಇವತ್ತಿಗೆ ತೆಗೆದುಕೊಂಡಿದ್ದೇವೆ. ನಿನ್ನೆ ಇದ್ದಂತಹ ಗಮನಸೆಳೆಯುವ ಸೂಚನೆ ಕೂಡ ಲ್ಯಾಪ್ಸ್ ಆಗಿವೆ. ಆದ್ದರಿಂದ ಇವತ್ತು ನೀವು ಸೂರತ್ಕಲ್ ವಿಚಾರಕ್ಕೆ ತಾವು ಕೊಟ್ಟಿದ್ದೀರಿ, ಅತಿವೃಷ್ಟಿ ಅನಾವೃಷ್ಟಿ ಬಗ್ಗೆ ಅವರು ಕೊಟ್ಟಿದ್ದಾರೆ, ಬಿಪಿಎಲ್ ಸಂಸ್ಥೆ ವಿಚಾರಕ್ಕೆ ಶ್ರೀಮಾನ್ ಶ್ರೀರಾಮರೆಡ್ಡಿಯವರು ಕೊಟ್ಟಿದ್ದಾರೆ. ಟೈಮ್ ಲಿಮಿಟ್